ಹಣ ಬೇಕೆಂದು ಹೇಳುತ್ತಿದ್ದರು. ಈ ವರ್ಷ ಮತ್ತೆ ರಿವೈಸ್ ಆಗಬೇಕೆಂದು ಹೇಳುತ್ತೀರಿ, ನಾವು ಮಾತೆತ್ತಿದರೆ, ಉತ್ತರ ಕರ್ನಾಟಕ ಎಂದು ಹೇಳುತ್ತೇವೆ ಎಂದು ನೀವು ಹೇಳುತ್ತಿರುತ್ತೀರು. ಇದು ಉದ್ದೇಶಪೂರ್ವಕವಾಗಿ ಆಗುತ್ತಿದೆ. ನೀವು ಮಾಡಿದರೆ ಮಾಡುತ್ತೇವೆಂದು ಹೇಳಿ; ಇಲ್ಲದಿದ್ದರೆ ಇಲ್ಲ ಎಂದು ಹೇಳಿ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಶೀಘ್ರದಲ್ಲಿಯೇ ಮಾಡಿಕೊಡುತ್ತೇವೆ.

ಅಧ್ಯಕ್ಷರು : ನೀವು ಕೋಪಿಸಿಕೊಂಡರೆ ಹೇಗೆ ಆಗುತ್ತದೆ?

ಶ್ರೀ ಎಸ್.ಹೆಚ್. ಕೌಜಲಗಿ : ಅಲ್ಲಿ ಒಂದು ಕೆಲಸ ಆಗಿಲ್ಲ, ಮೂರನೇ ಒಂದು ಭಾಗ ಹಣ ಇಲ್ಲವೆಂದು ಆಡಳಿತಾತ್ಮಕ ಮಂಜೂರಾತಿ ಕೊಡಲಿಲ್ಲ, ಹಣಕಾಸಿನ ಇಲಾಖೆಯನ್ನು ಹಿಡಿದುಕೊಂಡು, ಮೂರನೇ ಒಂದು ಭಾಗ ಹಣ ಮಾಡಿಸಿದ್ದಾಯಿತು. ಮತ್ತೆ ಈಗ ಟೆಕ್ನಿಕಲ್ ಅಡ್ಡ ಬಂದಿದೆ. ಈ ವರ್ಷವೂ ಹಣ ಲ್ಯಾಪ್ಸ್ ಆಗುತ್ತದೆ; ಹೋದವರ್ಷ 30 ಲಕ್ಷ ರೂಪಾಯಿ ಹಣ ಲ್ಯಾಪ್ಸ್ ಆಯಿತು. ಈ ರೀತಿ 30 ಲಕ್ಷ ರೂಪಾಯಿ ಲ್ಯಾಪ್ಸ್ ಆಯಿತೆಂದರೆ, ನಮಗೆ ಏನಾಗಬೇಕು? – ಈ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ಕ್ಲೋಸ್ ಮಾಡಬೇಕು. ಇಲ್ಲಿ ಏನೇನೂ ಕೆಲಸ ಆಗುತ್ತಿಲ್ಲ, ಒಂದೇಒಂದು ಕೆಲಸ ಮಾಡಿಲ್ಲ, ಹೊಸ ಎಸ್ಟಿಮೇಟ್ ಮಾಡುತ್ತೀರಾ? ಹೊಸ ಪ್ಲಾನ್ ಮಾಡುತ್ತೀರಾ? ಹೊಸ ನೀರಾವರಿ ತೆಗೆದುಕೊಂಡಿದ್ದೀರಾ? ಅವರು ಸುಮ್ಮನೆ ಕುಳಿತುಕೊಂಡು ಪಗಾರ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ: ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಆವೇಶದಿಂದ ಇದ್ದಾರೆಂದು ಕಾಣಿಸುತ್ತದೆ. ನನಗೆ ಸಣ್ಣ ನೀರಾವರಿ ಬಗ್ಗೆ ಇರತಕ್ಕ ಕಾಳಜಿ ಅವರಿಗೂ ಖಂಡಿತವಾಗಿಯೂ, ಪೀಜಿಬಿಲಿಟಿ ನೋಡಿಕೊಂಡು, ಮಾಡಿಸಿಕೊಡುತ್ತೇವೆಂದು ಭರವಸೆ ಕೊಡುತ್ತೇನೆ.

ಅಧ್ಯಕ್ಷರು : ಹೊರಗಡೆ ಚೆನ್ನಾಗಿದ್ದಾರೆಯೇ, ನಿಮ್ಮ ಜೊತೆಯಲ್ಲಿ ಅವರು?

ಶ್ರೀ ಬಿ.ಹೆಚ್. ಬನ್ನಿಕೋಡ್ : ಅಧಿಕಾರಿಗಳಿಗೆ ತೀವ್ರವಾಗಿ ಕೆಲಸ ಮಾಡುವುದಕ್ಕೆ ಹೇಳಿ. ಇದರಲ್ಲಿ ವೈಯಕ್ತಿಕವಾಗಿ ಯಾವುದೂ ಇಲ್ಲ, ಸರ್ಕಾರ ಹಣ ಒದಗಿಸಿದ್ದರೂ, ಕೆಲಸ ಆಗಿಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ : ಬಜೆಟ್‌ನಲ್ಲಿ ಹಣ ಬರಬೇಕಾದರೆ ಎಷ್ಟು ತ್ರಾಸ್ ಆಯಿತು. ಆದ್ದರಿಂದ, ಬಜೆಟ್‌ನಲ್ಲಿ ಬಂದಿರುವ ಹಣವನ್ನು ಖಿಚುರ್ ಮಾಡಿ, ಕೆಲಸ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತಿದ್ದೇವೆ. ಅಲ್ಲಿ, ನಿಮ್ಮಿಂದಲೇ ಅಡಿಗಲ್ಲು ಆಗಬೇಕು, ನಿಮ್ಮಿಂದಲೇ ಕೆಲಸ ಪ್ರಾರಂಭವಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಸರ್ವೆ ಕಾರ್ಯ ಮುಗಿದಿದೆ, ಖಂಡಿತವಾಗಿಯೂ ಈ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ನೀವು ಏರ್ಪಾಡು ಮಾಡಿ, ಅಡಿಗಲ್ಲಿಗೆ, ಏಕೆಂದರೆ ಅವರು ಮೂರು ತಿಂಗಳಿನಲ್ಲಿಯೇ ಮಾಡುತ್ತಾರೆ.

ಮುಳ್ಳಿಯಲ್ಲಿರುವ ಕಿರಿದಾದ ರಸ್ತೆಗಳು

2239 - ಶ್ರೀ ಸೋಮಪ್ಪ ಸುವರ್ಣ (ಮುಡಬಿದರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಮುಲ್ಕಿ ಫಿರ್ಕಾದ ಕಬೀಲು ದೇವಸ್ಥಾನದ ವಠಾರದಲ್ಲಿ ಆಗಲ ಕಿರಿದಾದ ರಸ್ತೆಯಿಂದಾಗಿ ವಾಹನ ಸಂಚಾರಕ್ಕೆ ತೊಂದರೆಯಾಗಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೆ?

ಆ) ಇಲ್ಲಿಗೆ ಒಂದು ಬೈಪಾಸು ರಸ್ತೆ ರಚಿಸಿದರೆ ತಗಲಬಹುದಾದ ಖರ್ಚೆಷ್ಟು?

ಇ) ಇದು ಬಜ್ಪೆ ನಿಲ್ದಾಣಕ್ಕೆ ಹೋಗುವ ಪ್ರಾಮುಖ್ಯ ರಸ್ತೆಯಾಗಿರುವ ಕಾರಣ ಈ ರಸ್ತೆಯ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು?

ಈ) ಆಗಿಂದಾಗ್ಗೆ ಈ ರಸ್ತೆಯಲ್ಲಿ ಅಪಘಾತಗಳು ಸಂಭವಿಸುತ್ತಿರುವುದರಿಂದ ಪ್ರಸಕ್ತ ವರ್ಷವೇ ಈ ರಸ್ತೆಯ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೇ?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) 10.00 ಲಕ್ಷ ರೂ.ಗಳ ಅಂದಾಜು ಆಗುತ್ತದೆ.

ಇ) ಈ ಕಾಮಗಾರಿಯನ್ನು 1992-93ರ ಸಾಲಿನ ಅಂದಾಜಿನಲ್ಲಿ ಸೇರಿಸಿ ಪ್ರಾರಂಭಿಸುವ ಪ್ರಸ್ತಾಪವಿದೆ.

ಈ) ಈ ಕಾಮಗಾರಿಯನ್ನು1992-93ರ ಸಾಲಿನ ಅಂದಾಜಿನಲ್ಲಿ ಸೇರಿಸಿ ಪ್ರಾರಂಭಿಸುವ ಪ್ರಸ್ತಾಪವಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಸ್ವಾಮಿ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಟೀಲು ಬಹಳ ಯಾತ್ರಾರ್ಥಿಗಳು ಬರುವಂತಹ ಸ್ಥಳವಾಗಿದ್ದು, ಅದರ ಬದಿಯಲ್ಲೇ ಪ್ರಾಥಮಿಕ ಶಾಲೆ, ಹೈಸ್ಕೂಲು, ಕಾಲೇಜು ಎಲ್ಲಾ ಇದೆ. ನೂರಾರು ಕಾರು ಬಸ್‌ಗಳಲ್ಲಿ ಬರುವುದರಿಂದ ಆ ದಾರಿಯಲ್ಲಿಯೇ ಹೋಗಬೇಕು. ಜನ ಹೋಗಲಿಕ್ಕೆ ಬಹಳ ತೊಂದರೆಯಾಗಿದೆ. ಬಜಪೆ ವಿಮಾನ ನಿಲ್ದಾಣಕ್ಕೆ ಕುಂದಾಪುರದವರು, ಉತ್ತರ ಕನ್ನಡ ಜಿಲ್ಲೆಯ ಜನರೂ ಸಹ ಈ ರಸ್ತೆಯಲ್ಲಿಯೇ ಹೋಗಬೇಕಾಗಿದೆ. ಯಾವಾಗ ನೋಡಿದರೂ ಇಲ್ಲಿ ಬಸ್‌ಗಳು ತಡೆ ಹಿಡಿಯಲ್ಪಟ್ಟು ವಿಮಾನ ನಿಲ್ದಾಣಕ್ಕೆ ಕ್ಲುಪ್ತ ಕಾಲದಲ್ಲಿ ಹೋಗಿ ಮುಟ್ಟುವುದಕ್ಕೆ ಆಗುವುದಿಲ್ಲ. ಆದುದರಿಂದ ಇದಕ್ಕೆ ಬೈಪಾಸ್ ಬೇಕೆಂದು ಹಲವಾರು ವರ್ಷಗಳಿಂದ ಕೇಳುತ್ತಿದ್ದೇವೆ. ತಾವು ತಮ್ಮ ಉತ್ತರದಲ್ಲಿ ಮುಂದಿನ ವರ್ಷ ಇದನ್ನು ಪ್ರಾರಂಭಿಸುವುದರ ಬಗ್ಗೆ ಆಲೋಚಿಸುವುದಾಗಿ ತಿಳಿಸಿದ್ದೀರಿ. ಅಲ್ಲಿ ಅನೇಕ ಆಕ್ಸಿಡೆಂಟ್ಸ್‌ಗಳು ಆಗುತ್ತಿರುವ ವಿಚಾರವನ್ನು ನೀವು ತಿಳಿದುಕೊಂಡಿದ್ದೀರಿ. ಆದುದರಿಂದ ಈ ವರ್ಷವೇ ಆ ಕೆಲಸವನ್ನು ಪ್ರಾರಂಭಿಸಲಿಕ್ಕೆ ತಾವು ಮುಂದಾಗಬೇಕು, ಅಲ್ಲಿಯ ಜನರು ಇದಕ್ಕೆ ಬೇಕಾದ ಸ್ಥಳವನ್ನು ಕೊಡುವುದಕ್ಕೆ ಸಹ ಮುಂದಾಗಿದ್ದಾರೆ. ಆದುದರಿಂದ ತಾವು ಸ್ಪಷ್ಟವಾದ ಅಭಿಪ್ರಾಯವನ್ನು ಈ ಸದನದಲ್ಲಿ ಹೇಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಅಧ್ಯಕ್ಷರೇ, ಆ ದೇವಸ್ಥಾನವನ್ನು ನಾನೂ ಕೂಡಾ ನೋಡಿದ್ದೇನೆ. ಅಲ್ಲಿ ರಸ್ತೆ ಬಹಳ ಇಕ್ಕಟ್ಟಾಗಿದೆ. ಆಕ್ಸಿಡೆಂಟ್ ಆಗುವುದಕ್ಕೆ ಹೆಚ್ಚಿನ ಅವಕಾಶ ಇದೆ. 1992-93ನೇ ಸಾಲಿನಲ್ಲಿ ಕೆಲಸ ಪ್ರಾರಂಭ ಮಾಡುತ್ತೇವೆಂದು ಉತ್ತರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇನೆ. ಅದಕ್ಕೋಸ್ಕರ 10 ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಈಗಾಗಲೇ ಆ ಊರಿನವರು ಸ್ಥಳ ಕೂಡಾ ಕೊಡುತ್ತೇವೆಂದು ಹೇಳಿದ್ದಾರೆ. ಆ ಸ್ಥಳವನ್ನು ಪಡೆದುಕೊಂಡು ಬಿಟ್ಟರೆ ಒಳ್ಳೆಯದು. ಮುಂದಿನ ವರ್ಷ ಕೆಲಸ ಪ್ರಾರಂಭ ಮಾಡುವುದಕ್ಕೆ ಆಗುತ್ತದೆ. ಇನ್ನಷ್ಟಿನ ಪರಿಸ್ಥಿತಿ ಮುಂದಿನ ವರ್ಷ ಇರುವುದಿಲ್ಲ. ಅಲ್ಲೇ ಒಂದು ಆಸ್ಪತ್ರೆ

ಕಟ್ಟುವುದಕ್ಕೆ ಐದು ಲಕ್ಷ ರೂಪಾಯಿ ದೇವಸ್ಥಾನದವರು ಕೊಟ್ಟರು. ಮೊದಲು ಇದಕ್ಕೆ ಸ್ಥಳವನ್ನು ಕೊಡುತ್ತೇವೆಂದು ಹೇಳಿದರೂ ಈಗ ತಪ್ಪಿಸಿಕೊಂಡಿದ್ದಾರೆ. ಆದುದರಿಂದ ಈಗಲೇ ರಸ್ತೆಗಾಗಿ ಸ್ಥಳವನ್ನು ಕೊಡುತ್ತೇವೆಂದು ಏನು ಮುಂದೆ ಬಂದಿದ್ದಾರೆ, ಅದನ್ನು ಶೀಘ್ರವಾಗಿ ಸ್ವಾಧೀನ ಪಡಿಸಿಕೊಂಡು ಈ ವರ್ಷವೇ ಸ್ವಲ್ಪ ಹಣವನ್ನು ಖರ್ಚು ಮಾಡಿ, ರಸ್ತೆಗಾಗಿ ಒಂದು ಶಂಕುಸ್ಥಾಪನೆಯನ್ನು ಮಾಡಿ ಕೆಲಸವನ್ನು ಪ್ರಾರಂಭ ಮಾಡಿದರೆ ಮುಂದಿನ ವರ್ಷ ಸುಲಭವಾಗುತ್ತದೆ. ಈ ವರ್ಷ ಅದನ್ನು ಮಾಡುವುದಕ್ಕೆ ಸಾಧ್ಯ ಉಂಟೇ ಎಂದು ಕೇಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ : ನಿರ್ದಿಷ್ಟವಾಗಿ ಹೇಳಿದ್ದೇನೆ. 92-93ರಲ್ಲಿ ಕೆಲಸ ಪ್ರಾರಂಭ ಮಾಡುತ್ತೇವೆಂದು ಸರಕಾರದ ವತಿಯಿಂದ ಹೇಳುತ್ತಿದ್ದೇನೆ. ರಸ್ತೆಗೆ ಜಾಗ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಇದರ ಉದ್ದ ಸುಮಾರು 1.8 ಕಿಲೋಮೀಟರ್ ಆಗುತ್ತದೆ. ರಸ್ತೆ ಮಾಡುವುದಕ್ಕೆ 10 ಲಕ್ಷ ಆಗುತ್ತದೆ. ಸ್ಯಾಂಕ್ಷನ್ ಮಾಡಿರುತ್ತೇವೆ. 92 ರಿಂದ ಶುರು ಮಾಡಿಸುತ್ತೇವೆ.

ಬಂಟ್ವಾಳ ತಾಲ್ಲೂಕಿನಲ್ಲಿರುವ ರಸ್ತೆಗಳ ದುರಸ್ತಿ

2174 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಬಂಟ್ವಾಳ ತಾಲ್ಲೂಕಿನ ಮಾಣಿ-ಉಳ್ಳಾಲ ಜಿಲ್ಲಾ ಪರಿಷತ್ ರಸ್ತೆ ಸಂಪೂರ್ಣ ದುರಸ್ತಿಯಾಗದೆ ಇರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಇದು ಇಲ್ಲಿಯ ಪ್ರಾಮುಖ್ಯ ರಸ್ತೆಯಾದುದರಿಂದ ಇದನ್ನು ರಾಜ್ಯ ರಸ್ತೆ (ಲೋಕೋಪಯೋಗಿ)ಯನ್ನಾಗಿ ಮಾಡಿ ದುರಸ್ತಿ ಪಡಿಸಲು ಸರ್ಕಾರ ಉದ್ದೇಶಿಸಿದೆಯೇ?

ಇ) ಹಾಗಿದ್ದಲ್ಲಿ ಇದನ್ನು ಎಂದಿನಿಂದ ದುರಸ್ತಿ ಮಾಡಬಹುದು?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಬಂದಿದೆ.

ಆ) ಈ ರಸ್ತೆಯು ಹಳ್ಳಿ ರಸ್ತೆಯಾಗಿದ್ದು ಜಿಲ್ಲಾ ಮುಖ್ಯ ರಸ್ತೆಯ ದರ್ಜೆಗೆ ಮೇಲ್ದರ್ಜೆಗೇರಿಸಲು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ರಸ್ತೆಯನ್ನು ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವವರೆವಿಗೆ, ಲಭ್ಯವಿರುವ ಅನುದಾನದಲ್ಲಿ ನಿರ್ವಹಣೆ ಮಾಡಿ ಸುಸ್ಥಿತಿಯಲ್ಲಿಡುವಂತೆ ಮಂಗಳೂರು ಜಿಲ್ಲಾ ಪರಿಷತ್ತಿನವರಿಗೆ ಸೂಚಿಸಲಾಗುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ : ಅಧ್ಯಕ್ಷರೇ, ಈ ಮಾಣಿ - ಉಳ್ಳಾಲ ರಸ್ತೆ ಬಹಳ ಪ್ರಮುಖವಾದುದು. ಇದು ಕೇರಳ ಮತ್ತು ಕರ್ನಾಟಕ ಅಂತರರಾಜ್ಯ ರಸ್ತೆ ಮತ್ತು ಹಲವಾರು ಗ್ರಾಮಗಳನ್ನು ಇದು ಸೇರಿಸುತ್ತದೆ. ಅದು ಮಾತ್ರವಲ್ಲ, ಮಂಗಳೂರು-ಬೆಂಗಳೂರು ಹೈವೇ ಏನಿದೆ ಇದು ಈ ವರ್ಷ ಅತಿಯಾದ ಮಳೆಯಿಂದ, ನಡುವೆ ಏನು ಬ್ರಿಡ್ಜಸ್ ಇದೆ ಅದು ತುಂಬಾ ಹಾಳಾಗಿ ಎರಡು ಮೂರು ದಿನ ಬಂದ್ ಆಗಿತ್ತು. ನೆರೆ ಬಂದಾಗ ಕೂಡಾ ಇದು ಬದಲಿ ರಸ್ತೆ ಆಗಿತ್ತು. ಬೆಂಗಳೂರು-ಧಾರವಾಡ ರಾಷ್ಟ್ರೀಯ ಹೆದ್ದಾರಿಗೆ ಇದು ಬದಲಿ ರಸ್ತೆಯಾಗಿದೆ. ಇಷ್ಟು ಪ್ರಾಮುಖ್ಯವಾದ ರಸ್ತೆ, ತುಂಬಾ ಮಳೆಯಿಂದ ದೊಡ್ಡ ದೊಡ್ಡ ಹೊಂಡ ಬಿದ್ದು ವಾಹನ ಸಂಚಾರ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದು ಜಿಲ್ಲಾ ಪರಿಷತ್ ರಸ್ತೆ. ಇದನ್ನು ಮೇಲ್ದರ್ಜೆಗೆ ಏರಿಸಿ, ಈ ವರ್ಷ ಜಿಲ್ಲಾ ಪರಿಷತ್ ಎಂಜಿನಿಯರಿಂಗ್ ವಿಭಾಗದವರು ಅದರ ರಿಪೇರಿಗಾಗಿ 35 ಲಕ್ಷ ರೂಪಾಯಿಗಳ ಅಂದಾಜು ತಯಾರಿಸಿದ್ದಾರೆ.